3. Gowdappa Gowda arrested on 5-1-84.

Independent eye wittness Shankare Gowda and Dawood Sab have had their statements recorded under Section 164 of CR.PC.

ಡಾ. ವಿ ಎಸ್. ಆಚಾರ್ಯ — ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು. — ನಾನು ಹೇಳಿದ್ದೇನಲ್ಲ, ಬೇರೆ ನಿಯಮಗಳನ್ನು ಸಸ್ಪೆಂಡ್ ಮಾಡಿಬಿಡೋಣ.

ಡಾ. ವಿ.ಎಸ್. ಆಚಾರ್ಯ. — ಅಧ್ಯಕ್ಷರೇ, ತಾವು ಒಂದು ವಿಚಾರವನ್ನು ಗಮನಿಸಬೇಕು. ನಿದ್ದೆ ಮಾಡುತ್ತಿದ್ದವನನ್ನು ಎಬ್ಬಿಸಿ ಹೊಡೆಯುತಕ್ಕಂಥ ಅಪರಾಧ ಆಗಿದೆ.

Mr. Speaker.— Please disscuss with the Chief Minister or send a seperate notice for discussion and I will take it up.

ಡಾ. ವಿ.ಎಸ್. ಆಚಾರ್ಯ.— ಅಧ್ಯಕ್ಷರೇ, ಇದು ಬಹಳ ಮಹತ್ವದ ಪ್ರಶ್ನೆ, ತಾವು ಒಂದು ನಿಮಿಷ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು.— ಬೇರೆ ಯಾವುದೇ ನಿಯಮಗಳಲ್ಲಿ ಅದನ್ನು ಕಳುಹಿಸಿ, ಅದನ್ನು ತೆಗೆದುಕೊಂಡು ಸುಧೀರ್ಘವಾಗಿ ಚರ್ಚೆ ಮಾಡೋಣ. ಆದರೆ Don't try to suppress the other provisions of the rules that you have framed.

ಡಾ. ವಿ.ಎಸ್. ಆಚಾರ್ಯ.— ಅಧ್ಯಕ್ಷರೇ, ನಾವು ಒಂದು ಅರ್ಧಗಂಟೆ ಒಂದು ಗಂಟೆ ತೆಗೆದು ಕೊಳ್ಳುವುದಿಲ್ಲ.

ಅಧ್ಯಕ್ಷರು.— ಬೇರೆ ನೋಟೀಸ್ ಕೊಡಿ, ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದು ಮಹತ್ವವಾದ ವಿಚಾರ. ಅಮಾನತಿಕರನ್ನು ಕೇಸ್‌ನಲ್ಲಿ ಅನಾವಶ್ಯಕವಾಗಿ ಸಿಕ್ಕಿಸಿದ್ದಾರೆ ಆದ್ದರಿಂದ ಅವಕಾಶ ಕೊಡಿ. ಇದು ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು. — I will take it up in a different manner. ಅದರೆ ಬೇರೆ ನೋಟೀಸ್ ಕೊಡಿ.

Sri G P. Wodeyaraj.— We will ask for discussion.

ಡಾ. ವಿ. ಎಸ್ ಆಚಾರ್ಯ — ಒಂದು ವಿಷಯ. 6ನೇ ತಾರೀಖು ನಾವು ಈ ವಿಷಯ ಎತ್ತಿದ ಮೇಲೆ, 5 ತಿಂಗಳಿಂದ ನಿದ್ದೆ ಮಾಡುತ್ತಿದ್ದ ಕೇಸ್‌ಗೆ ಚಾರ್ಜ್‌ಶೀಟ್ ಹಾಕಿದ ಮೇಲೆ ಸಿ.ಒ.ಡಿ. ತನಿಖೆ ಯಾಗಬಾರದು ಎಂದು ಇಲ್ಲ. ಹಿಂದೆ 1974-76ರಲ್ಲಿ ನಡೆದಂಥ ಪ್ರಕರಣಗಳನ್ನೂ ಸಿ.ಒ.ಡಿ. ತನಿಖೆಗೆ ಕೊಟ್ಟಿದ್ದು ಇದೆ.

Mr. Speaker.— You can send a seperate notice. I will take it up in a different manner.

(ii) ನಿಪ್ಪಾಣಿ ಹೊಗೆಸೊಪ್ಪು ಸಂಸ್ಕರಣ ಕೇಂದ್ರದಲ್ಲಿ ಯಂತ್ರ ಬಳಕೆ ಮತ್ತು ಅದರಿಂದ ಉಂಟಾಗುವ ನಿರುದ್ಯೋಗ ಸಮಸ್ಯೆ.

ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ನಿಪ್ಪಾಣಿಯಲ್ಲಿ ಹಲವಾರು ಹೊಗೆಸೊಪ್ಪಿನ ಸಂಸ್ಕರಣಾ ಸಂಸ್ಥೆಗಳು ಏನು ಇದೆ, ಅಲ್ಲಿ 25-30 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈಗ ಟೋಬ್ಯಾಕೋ ಪ್ರೊಸೆಸಿಂಗ್‌ನಲ್ಲಿ ಯಂತ್ರ ಉಪಯೋಗ ಮಾಡಿದ್ದರಿಂದ ಕೆಲಸ ಗಾರರು ಕೆಲಸ ಕಳೆದುಕೊಳ್ಳುತ್ತಿದ್ದಾರೆ ಅನೇಕ ಫ್ಯಾಕ್ಟರಿಯಲ್ಲಿ ಬಂದ್ ಆಗಿವೆ. 18-1-1984ರಲ್ಲಿ ಬಿ.ವಿ. ದೇಸಾಯಿ ಫ್ಯಾಕ್ಟರಿಯಲ್ಲಿ ಎರಡು ಸಾವಿರ ಕಾರ್ಮಿಕರನ್ನು ಕ್ಲೋಸರ್ ನಿಂದ ಹೊರಗೆ ಹಾಕಿದ್ದಾರೆ. ಟೊಬ್ಯಾಕೋ ಪ್ರೊಸೆಸ್‌ನಲ್ಲಿ ಈ ರೀತಿ ಯಂತ್ರ ಉಪಯೋಗ ಮಾಡುವುದು ಬಹಳ ನಿರುದ್ಯೋಗಕ್ಕೆ ಕಾರಣವಾಗಿದೆ. ಇವತ್ತು ನಿರುದ್ಯೋಗ ಎಷ್ಟು ಜಾಸ್ತಿಯಾಗಿದೆ ಎನ್ನುವುದು ನಮಗೆಲ್ಲಾ ಗೊತ್ತು. ಬೀಡಿ ಕಾರ್ಖಾನೆಯಲ್ಲಿ ಇಂತಹ ಒಂದು ಯಂತ್ರ ಬಂದಾಗ ಗೌರ್ನಮೆಂಟ್ ಆಫ್ ಇಂಡಿಯಾದವರು ನಿಷೇಧ ಮಾಡಿದರು. ಆದೇ ರೀತಿಯಲ್ಲಿ ಟೊಬ್ಯಾಕೋ ಪ್ರೊಸೆಸಿಂಗ್‌ನಲ್ಲಿ ಯಂತ್ರ ಬಂದಿರುವುದರಿಂದ ಬಹಳ ನಿರುದ್ಯೋಗ ಉಂಟಾಗುತ್ತಿದೆ. ಆದ್ದರಿಂದ ಇದನ್ನು ತಪ್ಪಿಸಲಿಕ್ಕೆ ಸರಕಾರ ಏನು ಮಾಡುತ್ತಿದೆ? ಇದರ ಬಗ್ಗೆ ನಮಗೆ ಒಂದು ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri Azeez Sait (Minister for Labour and Wakf).— Unfortunately, there is a tendency to introduce machines for the manufacture of Beedies. Sir, when Mr. V. V. Giri was the Labour Minister, with our efforts and with the submission of Memorandum and all that, this was stopped. Sir Central Excise duty is levied on tobacco but during the Janata regime at the Centre, they

removed the taxation on tobacco and they have imposed tax on Beedi manufacturers. The tobacco manufacturers are left scot and they have introduced certain machines for processing of tobacco with the result more than 50% of the labour become unemployed. Sir, my friend is raising this point now, and therefore I would like to tell him that I have already taken up this matter with the Government of India. Sir, I have brought this fact to the notice of the Union Labour Minister and I think there will be meeting in this regard during the first week of next month or by the end of this month. I am also equally worried about the introduction of these machines. On account of the using of these mechines, more than 50% of the persons who are working in this industry would be thrown out of employment and they become unemployed. I am aware of it. I have got full sympathy for them and I will definitely see what best I can do in this matter because as you are all aware, I have very little to do in this regard.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಕುಂದಾಪುರದಲ್ಲಿ 1982ನೇ ಇಸವಿಯಲ್ಲಿ ಬಂದಂತಹ .....

ಅಧ್ಯಕ್ಷರು.— ನಾನು ಅದನ್ನೇ ಪದೇ ಪದೇ ಈ ಸದನದಲ್ಲಿ ಹೇಳುತ್ತಿದ್ದೇನೆ. ಆದರೂ ತಾವು ಅದೇ ತಪ್ಪನ್ನು ಪುನಃ ಪುನಃ ಮಾಡುತ್ತಿದ್ದೀರಿ. 1982ನೇ ಇಸವಿಯಲ್ಲಿ ಆದಂತಹ ವಿಷಯವನ್ನು ಈಗ 334ರ ಕೆಳಗೆ ತೆಗೆದುಕೊಂಡು ಬಂದರೆ ಸರ್ಕಾರದಿಂದ ಯಾವ ರೀತಿಯ ಉತ್ತರ ಬಯಸುತ್ತೀರಾ?

ಶ್ರೀ ಪ್ರತಾಪಚಂದ್ರ ಶೆಟ್ಟಿ. — ಸರ್ಕಾರದಿಂದ ಪರಿಹಾರ 22ಲಕ್ಷ ರೂಪಾಯಿಗಳು ಬರುವುದು ಇದೆ, 1982ರಲ್ಲಿ ಬಂದಂತಹ ಬೇಕರ ನೆರೆ ಹಾವಳಿಯಲ್ಲಿ ಸುಮಾರು 2648 ಮನೆಗಳು ನಾಶವಾಗಿದ್ದು, ಅವುಗಳಲ್ಲಿ 1403 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. ಮತ್ತೆ 1245 ಮನೆಗಳು ಭಾಗಶಃ ನಾಶವಾಗಿವೆ. ಅವುಗಳಿಗೆ ಪರಿಹಾರವನ್ನು ಪೂರ್ಣವಾಗಿ ನಾಶವಾಗಿರುವ ಮನೆಗಳಿಗೆ 49ಲಕ್ಷ ರೂಪಾಯಿಗಳನ್ನು ಹಾಗೂ ಭಾಗಶಃ ನಾಶವಾಗಿರುವಂತಹ ಮನೆಗಳಿಗೆ 17ಲಕ್ಷ ರೂಪಾಯಿಗಳನ್ನು ಪರಿಹಾರವನ್ನಾಗಿ ಕೊಡಬೇಕೆಂದು ಸರ್ಕಾರಕ್ಕೆ ಮನವಿಯನ್ನು ಈಗಾಗಲೇ ಸಲ್ಲಿಸಿದ್ದಾರೆ. ಆದರ ಪ್ರಕಾರ ಈವರೆಗೆ 33ಲಕ್ಷ ಹಣ ಮಾತ್ರ ಸಂದಾಯವಾಗಿದ್ದು ಇನ್ನೂ 22, 33,000 ರೂಪಾಯಿಗಳು ಸರ್ಕಾರದಿಂದ ಪರಿಹಾರ ಬರಬೇಕಾಗಿದೆ. ಪರಿಸ್ಥಿತಿ ಏನಾಗಿದೆ ಎಂದರೆ ಭಾಗಶಃ ನಾಶವಾಗಿರತಕ್ಕಂತಹ ಮನೆಗಳೂ ಕೂಡ ಇವತ್ತು ಸಂಪೂರ್ಣವಾಗಿ ಬಿದ್ದುಹೋಗುವಂತಹ ಪರಿಸ್ಥಿತಿಯಲ್ಲಿವೆ. ಕೆಲವು ತಾಂತ್ರಿಕ ದೋಷಗಳಿಂದ, ಅಂದರೆ ಡಿಕ್ಲರೇಷನ್ ಕೊಡುವಾಗ, ಕೆಲವೊಂದು ಕೇಸುಗಳು ಹೈಕೋರ್ಟಿಗೆ ಹೋಗುವುದರಿಂದ, ತಕ್ಷಣ ಬಗೆಹರಿಯುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ತಕ್ಷಣ 22ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— 1982ನೇ ಇಸವಿಯಲ್ಲಿ ಆಗಿರತಕ್ಕ ವಿಚಾರದ ಬಗ್ಗೆ ಈಗ ಪ್ರಸ್ತಾಪ ಮಾಡುತ್ತಿದ್ದಾರೆ ತಕ್ಷಣ ಹೇಗೆ ಉತ್ತರ ಹೇಳುವುದಕ್ಕೆ ಸಾಧ್ಯ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸುಮಾರು 10 ಸಾವಿರ ಮಂದಿ ಇವತ್ತು ಬೀದಿ ಪಾಲಾಗಿದ್ದಾರೆ ಅವರಿಗೆ ಮನೆ ಇಲ್ಲ. ಮಠ ಇಲ್ಲ. ಬಹಳ ತೊಂದರೆ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ನನಗೆ ನೇರವಾಗಿ ಬಂದು ಹೇಳಿದ್ದರೂ ಈವರೆಗೆ ಆ ಬಗ್ಗೆ ವಿವರಗಳನ್ನು ತರಿಸಿಕೊಂಡು ಹೇಳುತ್ತಿದ್ದೆ. ನಾನು ಕುಂದಾಪುರಕ್ಕೆ 2 ಸಾರಿ ಹೋಗಿದ್ದೆ. ಉಡುಪಿಗೆ ಮೂರು ಸಾರಿ ಹೋಗಿದ್ದೆ. ನನ್ನ ಪ್ರವಾಸ ಕಾರ್ಯಕ್ರಮವನ್ನು ಮಾನ್ಯ ಸದಸ್ಯರಿಗೂ ತಿಳಿಸಿದ್ದೆ ಆವಾಗಲಾದರೂ ನನ್ನಲ್ಲಿ ಹೇಳಬೇಕಾಗಿತ್ತು.

ಅಧ್ಯಕ್ಷರು.— ನಿಮಗೆ ಮನೆ-ಮಠ ಏನೂ ಇಲ್ಲದಿರುವುದರಿಂದ, ಇಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡಿದರೆ ಅನುಕೂಲವಾಗಬಹುದು ಅಂತ ವಿಷಯ ಪ್ರಸ್ತಾಪ ಮಾಡಿದ್ದಾರೆ.

(ನಗು)

(iii) ದೇವರಾಜ್ ಅರಸ್ ರ ಪ್ರತಿಮೆ ಸ್ಥಾಪನೆ ಬಗ್ಗೆ

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ದಿವಂಗತ ಶ್ರೀ ದೇವರಾಜ ಅರಸ್ ರವರ